ವರ್ಷಗಳ ಕಾಲ ಸಹಾಯಕ ಸೈನ್ಯ ಪದ್ಧತಿ ಎಂಬ ಬ್ರಿಟಿಷರ ಯೋಜನೆಯ ಭಾಗವಾಗಿ ಅವನು ಕೆಲಸ ಮಾಡಿದ್ದರಿಂದ. ಅವನು ಮತ್ತೆ ಹೇಳುತ್ತಿದ್ದ, 'ಇದು ಮೊದಲನೇ ಜಾಗತಿಕ ಯುದ್ಧವಾಗಿರಬಹುದು. ಇನ್ನು ಮುಂದೆ ಎರಡನೇ, ಮೂರನೇ, ನಾಕನೇ ಜಾಗತಿಕ ಯುದ್ಧಕ್ಕೆ ನೀವು ತಯಾರಾಗಬೇಕಾಗುತ್ತದೆ' ಎಂದು ಹೇಳಿ ಕೈಗಳಿಗೆ ಹೊಸ ಹೊಸ ಬಂದೂಕುಗಳ ಕೊಟ್ಟು, ಬಂಕರ್‌ಗೆ ಜಾರುತ್ತಿದ್ದ.

ಯುದ್ಧಭೂಮಿಯ ಸುದ್ದಿಗಳು ಭೀಕರವಾಗಿದ್ದವು. ದಿನಾಲು ಸಾವಿರಾರು ಸೈನಿಕರು ಸತ್ತರೆ, ಸಾವಿರಾರು ಸೈನಿಕರು ನಾಪತ್ತೆಯಾಗುತ್ತಿದ್ದರು. ಇನ್ನೂ ಅರೆ ಗಾಯಗೊಂಡ ಸೈನಿಕರು ಆ ದೊಡ್ಡ ದೇಶ ನಿರ್ಮಿಸಿದ ತಾತ್ಕಾಲಿಕ ಡೇರೆ ಒಳಗೆ ಅರಣ್ಯ ರೋದನೆಗೆ ಮುಖಾಮುಖಿಯಾಗುತ್ತಿದ್ದರು. ಇಲ್ಲಿ ಗಾಯಗೊಳ್ಳುವುದೇ ಸಾವಿಗಿಂತಲೂ ಕಷ್ಟಕರವಾದ ನರಕ ಹಿಂಸೆಯ ಕೆಲಸ ಎಂದು ಯುದ್ಧದ ಪರಿಣಾಮಗಳು ಚೀರಿ ಚೀರಿ ಹೇಳುತ್ತಿದ್ದವು.

ಇಂದು ಥಾಮಸ್ ಕ್ಯಾಪ್ಟನ್‌ಗಳನ್ನು ಸೈನಿಕರನ್ನು ಮತ್ತು ಮೇಜರ್‌ಗಳನ್ನು ಅಭಿಪ್ರೇರಿಸಲು ರಣಾಂಗಣಕ್ಕೆ ಬಂದಿದ್ದ ಎರಡು ದಿನ ಯುದ್ಧದ ಹಿನ್ನೆಡೆಯಾಗಿತ್ತು. ಶತ್ರು ಸೈನಿಕರು ಮೇಲ್ಮೈ ಸಾಧಿಸಿದ್ದರು. ಇದನ್ನು ಅರಿತ ಅವನು ತುಸು ಜಾಸ್ತಿಯೇ ಮಾತಾಡಿದ್ದ. ಅತೀ ಹುಮ್ಮಸ್ಸಿನಿಂದ ಭಾಷಣ ಮಾಡುತ್ತಿದ್ದವನಿಗೆ ಎದೆಯ ಪಕ್ಕ, ಭುಜದ ಬಲಭಾಗ, ಎಲ್ಲೋ ದೂರದಿಂದ ಬಂದ ಎರಡು ಗುಂಡು ಹೊಕ್ಕಿದ್ದವು. ತಕ್ಷಣವೇ ಕೆಳಗೆ ಬಿದ್ದವನಿಗೆ, ತುರ್ತು ಚಿಕಿತ್ಸಾ ವಿಭಾಗಕ್ಕೆ ಹೊತ್ತೊಯ್ದಿದ್ದರು. ಆಮೇಲೆ ಅವನನ್ನು ವೈದ್ಯಕೀಯ ಸಂಶೋಧನಾ ಡೇರೆಗೆ ಕಳುಹಿಸಿಕೊಡಲಾಯಿತು. ಅಲ್ಲಿ ಅವನ ಹೃದಯದ ಮೇಲಿನ ಚರ್ಮವ ಕಿತ್ತು ಹೃದಯ ರೋಗಗಳ ಅನೇಕ ವಿಕಾರಗಳ ಬಗ್ಗೆ ಅಧ್ಯಯನ ಮಾಡಲಾಯಿತು. ಅವನ ಚೀರಾಟಕೂಗಾಟಗಳು ಮುಗಿಲು ಮುಟ್ಟಿದ್ದವು. ಆಮೇಲೆ ನಾಲ್ಕು ದಿನಗಳ ತರುವಾಯ ಅವನ ಅರೆ ಜೀವ ದೇಹವನ್ನು ಎತ್ತಲೋ ಬಿಸಟಿದ್ದರು. ಈ ರಣಭೂಮಿ ಯಾರಿಗೂ ಭೇದ ಭಾವ ಮಾಡಿರಲಿಲ್ಲ. ಇಲ್ಲಿ ದಂಡನಾಯಕನೂ ಒಂದೇ ಸಿಪಾಯಿಯೂ ಒಂದೇ.

ಒಂದು ದಿನ ಯುದ್ಧ ಮುಗಿಯಿತು ಎಂದು ಘೋಷಿಸಲಾಯಿತು. ಮೂವತ್ತು ಲಕ್ಷ ಜನರು ಸತ್ತಿದ್ದರು. ಹತ್ತು ಲಕ್ಷ ಜನರು ನಾಪತ್ತೆಯಾಗಿದ್ದರು, ಮೂರು ಲಕ್ಷ ಜನರಿಗೆ ಅರೆಬರೆ ಕೊಯ್ದು ಸಂಶೋಧನೆಗೊಳಪಡಿಸಿ ಸಂಶೋಧನೆಯ ಮೈಲುಗಲ್ಲಿಗಳನ್ನು ನೆಟ್ಟುಕೊಂಡಿತ್ತು ಆ ದೊಡ್ಡ ದೇಶ. ಈ ರಣಾಂಗಣದ ಹೆಣಗಳನ್ನು ನಗರದಾಚೆಯ ನಿರ್ಜನ ಬಯಲಿನಲಿ ಸುಡಬೇಕೆಂದು ತೀರ್ಮಾನಿಸಲಾಯಿತು. ಅದರಂತೆ ರಾಶಿ ರಾಶಿ ಹೆಣಗಳನ್ನು ಹೊತ್ತೊಯ್ದು ಸುಡಲಾಯಿತು. ಒಂದು ದಿನ ಅಲೆಗ್ಸಾಂಡರ್ ಎಂಬ ದೈತ್ಯ ರಣಹದ್ದು ಇವನ ಡೇರೆಯ ಮುಂದೆ ಬಂದು ನಿಂತಿತು. ಅದರ ಮೂಖದಲ್ಲಿ ಕೃತಜ್ಞತೆಯ ಭಾವ ಇತ್ತು. ನಾಲ್ಕು ವರ್ಷಗಳ ಕಾಲ ಸಮೃದ್ಧ ಭೋಜನ ಕೊಟ್ಟವನು ಇವನು. ಇವನಿಗೆ ಕೃತಜ್ಞತೆ ಸಲ್ಲಿಸಲೋ ಅಥವ ಇವನಂಥ ಗೆಳೆಯ ಮತ್ತೆ ಸಿಗಲಾರನೋ ಎನ್ನುವಂತೆ ಭೈರವಿಯ ಸ್ವರಗಳಲ್ಲಿ ಏನೇನೋ ಉಸರುತ್ತಿತ್ತು.

ಇವನು ಮುಂಜಾನೆಯೇ ಹೊರಡಬೇಕಾಗಿತ್ತು. ಅದಕ್ಕಾಗಿ ಹಡಗು ಸಜ್ಜಾಗಿ ನಿಂತಿತ್ತು. ಒಂದು ಸಲ ಈ ರಣಾಂಗಣವನ್ನು ಸುತ್ತಬೇಕೆಂಬ ಆಸೆ ಆಯಿತವನಿಗೆ. ಸುತ್ತಿದ. ಚೀತ್ಕಾರಗಳು, ಎಲ್ಲವೂ ಕಾಲನ ಕಿರೀಟದಲಿ ಒಂದಾಗಿದ್ದವು. ಇವನು ಆ ರಣಾಂಗದಲಿ ತಿರುಗಾಡುವಾಗ ಆ ರಣಹದ್ದು ಇವನ ಹಿಂದೆಯೇ ಹೆಜ್ಜೆ ಹಾಕುತ್ತಿತ್ತು. ಅಂದು ಯಾಕೋ ಮಳೆಯ ಆರ್ಭಟ ಇವನು ಅವಸರಿಸಿ ಡೇರೆಯ ಒಳಗೆ ಹೋದ. ಆ ರಣಹದ್ದು ಆ ಡೇರೆಯ ಹೊರಗೆ ವಿನಮ್ರವಾಗಿ ಮುಂಗಾಲುಗಳನ್ನು ಚಾಚಿಕೊಂಡು ನಮಸ್ಕರಿಸುವ ಭಂಗಿಯಲ್ಲಿ ಕುಳಿತಿತ್ತು. ಇವನೂ ಗೆಳೆಯನೇ. ಇವನನ್ನೂ ಬಿಟ್ಟು ಹೋಗುವ ಅನಿವಾರ್ಯತೆ ಇಂದು. ಇವನ ಜೊತೆ ಮೂರು ವರ್ಷಗಳ ನೆನಪುಗಳಿವೆ. ಅವನ ತಮ್ಮಂದಿರ ಪ್ರೇಯಸಿಯ ರಕ್ತ ಅಲೆಕ್ಸಾಂಡರನ ದೇಹದಲ್ಲಿಯೆ ಇದೆ.

## ಭಾಗ 2

ಇವನೂ ತಮ್ಮೂರಿಗೆ ಬಂದಿದ್ದ. ಮೊದಲ ಯುದ್ಧದ ಇವನ ಪರಾಕ್ರಮಕ್ಕೆ ಮೆಚ್ಚಿ ಬ್ರಿಟಿಷ್ ಸರ್ಕಾರ ಹತ್ತು ಎಕರೆ ಭೂಮಿಯನ್ನು ತನ್ನೂರಿನ ಕೃಷ್ಣಾನದಿಯ ತಟಾಕದಲ್ಲಿ ಕೊಟ್ಟಿತ್ತು. ಇವನನ್ನು ನೌಕರಿಯಿಂದ ಬಿಡುಗಡೆ ಮಾಡುವಾಗ ಒಂದು ಮೌಲ್ಯಯುತವಾದ